# ಕವಿರಾಜ ಮಾರ್ಗ ಪೂರ್ವಯುಗದ ಶಾಸನಗಳಲ್ಲಿ ಕನ್ನಡ ಸಾಹಿತ್ಯ

**ಲಕ್ಷ್ಮಿದೇವಿ ಎನ್.**

ಸಹಾಯಕ ಪ್ರಾಧ್ಯಾಪಕರು

ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್

ಚಿಕ್ಕಬಳ್ಳಾಪುರ

lakshmidevin95@gmail.com

ಕರ್ನಾಟಕವು ಭವ್ಯವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪರಂಪರೆಗಳಂತೆಯೇ ಸಾಹಿತ್ಯಿಕ ಪರಂಪರೆಯನ್ನು ಹೊಂದಿದ ನಾಡಗಿದೆ. ಕನ್ನಡ ಭಾಷೆಗೆ 2000 ಹಾಗೂ ಲಿಪಿಗೆ 1600ವರ್ಷಗಳ ಇತಿಹಾಸವಿದೆ. ಕನ್ನಡ ನಾಡನ್ನು ಆಳಿದ ಅರಸು ಮನೆತನಗಳು ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಚಾಲುಕ್ಯರು, ವಿಜಯನಗರದ ಅರಸರು, ಮೈಸೂರು ಅರಸರು ಮುಂತಾದ ರಾಜಮನೆತನಗಳು ಅವರವರ ಕಾಲದಲ್ಲಿ ಬರೆಯಿಸಿದ ಶಾಸನಗಳು ಕನ್ನಡ ಸಾಹಿತ್ಯದ ಬಗೆಗಿನ ಅಧ್ಯಯನಕ್ಕೆ ಆಧಾರವಾಗಿದೆ. ಹೀಗೆ ಶಾಸನಗಳು ಸಾಹಿತ್ಯಿಕ ಪರಂಪರೆಗೆ ಬುನಾದಿಯಾಗಿದೆ. ಕನ್ನಡ ಸಾಹಿತ್ಯದ ಕಾವ್ಯ ಮೀಮಾಂಸೆ, ಕನ್ನಡ ಛಂದಸ್ಸು, ಕನ್ನಡ ವಿಮರ್ಶೆ, ಕನ್ನಡ ವ್ಯಾಕರಗಣಗಳು ಇರುವ ಹಾಗೆ ಕನ್ನಡ ಶಾಸನ ಸಾಹಿತ್ಯ ಎಂಬುದು ಒಂದು ಇದೆಯೇ? ನಮ್ಮ ಈ ದಶಕದ ಸಾಹಿತ್ಯ ಸಂಶೋಧನೆಗಳು ಹಲವು ಧಾರೆಗಳಲ್ಲಿ ಮುಂದುವರೆದಿರುವುದರಿಂದ, ಅವುಗಳಲ್ಲಿ ಶಾಸನಶಾಸ್ತ್ರವು ಒಂದು. ಆದರೆ ಶಾಸನ ಒಂದೇ ಕನ್ನಡ ಸಾಹಿತ್ಯದ ನೆಲೆಗಟ್ಟು. ಇದರಿಂದಲೆ ಕನ್ನಡ ಸಾಹಿತ್ಯದ ಉಗಮ ಎಂಬ ಚೌಕಟ್ಟಿಗೆ ತುರುಕಲು ಆಗುವುದಿಲ್ಲ. ವಿಜ್ಞಾನ, ಕಲೆ, ಸಾಹಿತ್ಯ, ವಾಙ್ಮೀಯತೆ, ಶಾಸ್ತ್ರ, ಶಾಸನ ಇತ್ಯಾದಿಗಳೆಲ್ಲಾ ಸಂಶೋಧನ ವಲಯಗಳೇ ಆಗಿವೆ. ನಂತರದಲ್ಲಿ ಜಾನಪದ, ರಾಜಕೀಯ, ಆರ್ಥಿಕತೆ ಎಂಬ ಉನ್ನತ ಅಧ್ಯಯನದಲ್ಲೂ ಸಂಶೋಧನೆಗಳು ಬರುತ್ತದೆ. ಈ ವಿಚಾರಗಳನ್ನು ಗಮನಿಸಿದಾಗ ಶಾಸನ ಶಾಸ್ತ್ರ ಎಂಬುದು ಬಹುಶಿಸ್ತೀಯ ಹಾಗೂ ಅಂತರ್ ಶಿಸ್ತೀಯವಾಗುತ್ತದೆ.

ಕನ್ನಡ ಪ್ರಾಚೀನ ಸಾಹಿತ್ಯದ ಬಗ್ಗೆ ಮಾತನಾಡುವಾಗ ನಾವು ಕನ್ನಡ ನಾಡಿನ ಶಿಲಾಶಾಸನಗಳ ಮೊರೆ ಹೋಗಬೇಕಾಗುತ್ತದೆ. ಏಕೆಂದರೆ ಕಲ್ಲಿನ ಮತ್ತು ತಾಮ್ರ ಪಟಗಳ ಮೇಲೆ ಕೊರೆದ ಕನ್ನಡದ ಬರವಣಿಗೆಯೇ ನಮ್ಮ ಕನ್ನಡ ಸಾಹಿತ್ಯ ಪರಂಪರೆಯ ಪ್ರಾಚೀನತೆಗೆ ದೊರಕುವ ಮೊದಲ ಸಾಕ್ಷಿ. ಆಕರ ಸಾಮಾಗ್ರಿಗಳು ಶಾಸನಗಳು ಕನ್ನಡ ನಾಡಿನ ಸಾಂಸ್ಕೃತಿಕ, ಸಾಹಿತ್ಯಿಕ ಇತಿಹಾಸವನ್ನು ಕರಾರುವಕ್ಕಾಗಿ ನಾವು ತಿಳಿದುಕೊಳ್ಳಲು ಅನುವಾಗುತ್ತದೆ. ನಮ್ಮಲ್ಲಿ ಶಾಸನ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಅದನ್ನು ಜಾನಪದ ದೃಷ್ಟಿಯಿಂದ, ಸಮಾಜ ಶಾಸ್ತ್ರೀಯ ದೃಷ್ಟಿಯಿಂದ, ಜನಾಂಗೀಯ ದೃಷ್ಟಿಯಿಂದ, ಚಾರಿತ್ರಿಕ ದೃಷ್ಟಿಯಿಂದ, ಸಾಹಿತ್ಯಿಕ ದೃಷ್ಟಿಯಿಂದ ಅಧ್ಯಯನ ಮಾಡಬೇಕಾಗುತ್ತದೆ.

DOI: 10.59176
http://www.kristujayantijournal.com/index.php/KJKSP

ಕನ್ನಡ ಭಾಷೆಗೆ ಸಂಬಂಧಪಟ್ಟ ಸಂಶೋಧನೆಗಳು 20ನೇ ಶತಮಾನದಲ್ಲಿ ಅನೇಕ ಮಹತ್ವದ ನೆಲೆಗಟ್ಟಿನಲ್ಲಿ ಪ್ರವೇಶಿಸಿದೆ. ಅದರಲ್ಲಿ ಶಾಸನ ಶಾಸ್ತ್ರವು ಒಂದು. ಶಾಸನಗಳನ್ನು ಪುರಾತತ್ವ ಶಾಸ್ತ್ರದ ಒಂದು ಅಂಗವಾಗಿ ಗುರುತಿಸಲಾಗಿದೆ. ಭಾರತೀಯರಲ್ಲಿ ಚಾರಿತ್ರಿಕ ಪ್ರಜ್ಞೆ ಇಲ್ಲ, ಎನ್ನುವ ಭಾವನೆ ಪಾಶ್ಚಾತ್ಯ ವಿದ್ವಾಂಸರಿಗೆ ಶಾಸನಗಳು ಪ್ರಮುಖ ಅಧಿಕೃತ ದಾಖಲೆ ಎನಿಸಿದವು ನಾಡಿನ ರಾಜಕೀಯ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಅರ್ಥ ಮಾಡಿಕೊಳ್ಳಲು ಶಾಸನಗಳು ಪ್ರಮುಖ ಪಾತ್ರವಹಿಸುತ್ತವೆ.

ಶಾಸನಗಳು ಪ್ರಮುಖವಾಗಿ

- ಶಾಸನಗಳು ಅಂದಿನ ಕಾಲದ ಪರಿಸರಕ್ಕೆ ಸಂಬಂಧಿಸಿರುತ್ತದೆ.
- ಶಾಸನಗಳನ್ನು ಬರೆಯಲು ಆರಿಸಿಕೊಂಡ ಕಲ್ಲು, ಬಂಡೆ, ತಾಮ್ರ ಪಟಗಳ ಸ್ಥಳ ಸೀಮಿತವಾಗಿರುವುದು.
- ಪಾಶ್ಚಾತ್ಯ ಮತ್ತು ದೇಶೀಯ ವಿದ್ವಾಂಸರಿಗೆ ಶಾಸನಗಳು ವಿಷಯ ನಿರೂಪಣೆಗೆ, ಶಾಸನ ಸ್ಥಾಪಿಸಲು ವೀಸಲಿಟ್ಟ ಲಭ್ಯವಿದ್ದ ಜಾಗ, ವಾಸ್ತವ ಸಂಗತಿ, ಸಂದರ್ಭ ಶಾಸನದ ನಿರ್ದೇಶನದ ಬಗ್ಗೆ ತಿಳಿಯುವುದು
- ಅಂದಿನ ಕಾಲದ ಭಾಷೆ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಮಾಹಿತಿಯ ಲಭ್ಯತೆ.
- ರಾಜರ ಬಗ್ಗೆ, ದಾನ ದತ್ತಿಯ ಬಗ್ಗೆ, ಸತಿ ಸಹಗಮನದ ಬಗ್ಗೆ, ವೀರ ಮರಣದ ಬಗ್ಗೆ, ಧರ್ಮದ ಬಗ್ಗೆ, ಸಾಹಿತ್ಯದ ಬಗ್ಗೆ ಮಾಹಿತಿ ಸಿಗುತ್ತದೆ.

ಪಾಶ್ಚಾತ್ಯರಿಂದ ಆರಂಭವಾದ ಶಾಸನಗಳ ಅಧ್ಯಯನವು ಕನ್ನಡ ನಾಡಿನ ಚರಿತ್ರೆಯನ್ನು ತಿಳಿಯಲು ಪೂರಕವಾದ ಸಾಮಗ್ರಿಯಾಯಿತ್ತೆನ್ನಬಹುದು. ಈ ನಿಟ್ಟಿನಲ್ಲಿ ಆ ನಂತರದ ದಿನಗಳಲ್ಲಿ, ಅಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧಕರು ಶಾಸನಗಳನನ್ನು ಕುರಿತು ಅಧ್ಯಯನವನ್ನು ಕೈಗೊಂಡ ಹಿನ್ನಲೆಯಲ್ಲಿ ಸಂಶೋಧನೆಯ ದಿಕ್ಕೆ ಬದಲಾಯಿತು. ಒಂದು ಭಾಷೆಯ ಇತಿಹಾಸವನ್ನು ತಿಳಿಯಲು ಶಾಸನಗಳು ಬಹಳ ಪ್ರಮುಖ ಆಧಾರಗಳಾಗಿವೆ. ಕನ್ನಡದ ಇತಿಹಾಸ ತಿಳಿಯಲು ಶಾಸನಗಳು ನಮಗೆ ಸಹಾಯಕವಾಗಿದೆ. 2008ರಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಗರಿಮೆ ದೊರಕಿಸಿ ಕೊಡುವಲ್ಲಿ ಶಾಸನಗಳ ಪಾತ್ರವು ಮಹತ್ವವಾದುದು. ಈ ನಿಟ್ಟಿನಲ್ಲಿ ಕಾಕುತ್ಸವರ್ಮನ ಹಲ್ಮಿಡಿ ಶಾಸನವು ಕ್ರಿ.ಶ.450ರ ಹೊತ್ತಿನಲ್ಲಿ ಕನ್ನಡ ಭಾಷೆಯ ಸ್ಥಿತಿಯ ಬಗ್ಗೆ ತಿಳಿಯಲು ಸಹಾಯಕವಾಗಿದೆ. 1936ರಲ್ಲಿ ಡಾ.ಎಂ.ಎಚ್. ಕೃಷ್ಣ ಎಂಬುವರಿಂದ ಸಂಶೋಧಿಸಲ್ಪಟ್ಟಿತ್ತು. ಈ ಶಾಸನವು ಪೂರ್ವದ ಹಳಗನ್ನಡ ಶಾಸನವಾಗಿದ್ದು, 16 ಸಾಲುಗಳ ಈ ಶಾಸನ ಅಂದಿನ ಕಾಲದ ಕನ್ನಡ ಲಿಪಿಯು ಬ್ರಾಹ್ಮಿಲಿಪಿಗಳನ್ನು ಹೋಲುವಂತಹ ಕನ್ನಡ ಲಿಪಿಯಲ್ಲಿದೆ. ಇದೊಂದು ದಾನ ಶಾಸನವಾಗಿದ್ದು, ಆ ಕಾಲಕ್ಕೆ ಬಳಕೆಯಲ್ಲಿದ್ದ ಪ್ರೌಢ ಕನ್ನಡವನ್ನು ನಿರೂಪಿಸತುತ್ತದೆ.

ಕದಂಬ ರಾಜ ಕಾಕುತ್ಸವರ್ಮನು ಆಳುತ್ತಿದ್ದ ಕಾಲಕ್ಕೆ ಈ ಶಾಸನವು ಗ್ರಾಂಥಿಕ ರಚನೆಯನ್ನು ಹೋಲುವಂತಹ ಕನ್ನಡ ಲಿಪಿಯು ವಿಭಿನ್ನವಾಗಿದ್ದರೂ ಶಾಸನದಲ್ಲಿರುವ ವಿಷಯ ಮತ್ತು ನುಡಿಯು ಕನ್ನಡ ನಾಡಿನ ಹಿರಿಮೆಯನ್ನು

ಸಂಪುಟ ೩, ಸಂಚಿಕೆ ೧, ಮಾರ್ಚ್ ೨೦೨೪ | E-ISSN: 2583-8245
Volume 3, Issue 1, March 2024

ತಿಳಿಸುತ್ತದೆ. ಕನ್ನಡದ ಒಟ್ಟು 25 ಪದಗಳು ಈ ಶಾಸನದಲ್ಲಿದ್ದು, ಈ ಶಾಸನದ ಭಾಷೆಯು ಕನ್ನಡ ಭಾಷೆಯ ವಿಕಾಸದ ಹಂತದಲ್ಲಿ ಮೊದಲ ಹಂತವೆಂದು ಹೇಳಬಹುದು ಚಿತ್ರದುರ್ಗದಲ್ಲಿ ದೊರೆತ ಬ್ರಾಹ್ಮಿಲಿಪಿಯ ಅಶೋಕನ ಶಾಸನದಲ್ಲಿ 'ಇಸಿಲ' ಎಂಬ ಹೆಸರಿದ್ದು, ಇದು ಕನ್ನಡದ ಮೊದಲ ಪದವಾಗಿದ್ದು, ಬಹುಶಃ ಕ್ರಿ.ಪೂ.ದಲ್ಲೇ 'ಕನ್ನಡ ಭಾಷೆ' ಅಸ್ಥಿತ್ವದಲ್ಲಿ ಇದ್ದಿರಬಹುದು. ಆದರೆ ಈ ಪದವನ್ನು ಬಿಟ್ಟರೆ ಆ ಕಾಲಕ್ಕೆ ಇದಕ್ಕಿಂತ ಹೆಚ್ಚಿನ ಮಾಹಿತಿ ಲಭ್ಯವಿಲ್ಲ.

**ತಾಳಗುಂದ ಶಾಸನ**

2013/14ರಲ್ಲಿ ಕೇಂದ್ರ ಪುರಾತತ್ವ ಇಲಾಖೆ ನಡೆಸಿದ ಉತ್ಖನನದಲ್ಲಿ ಪತ್ತೆಯಾದ ತಾಳಗುಂದ ಶಾಸನ ಕನ್ನಡದಲ್ಲಿ ಈವರೆವಿಗೂ ದೊರೆತ ಶಾಸನಗಳಲ್ಲಿ ಅತ್ಯಂತ ಪ್ರಾಚೀನ ಶಾಸನ ಎಂದು ಭಾರತೀಯ ಪುರಾತತ್ತ್ವ ಇಲಾಖೆ ಅಧಿಕೃತವಾಗಿ ಪ್ರಕಟಿಸಿದೆ.


ಪ್ರಜಾವಾಣಿ

ಕ್ರಿ.ಶ.370 ರಿಂದ 450ರ ಮಧ್ಯದ ಅವಧಿ: ದೃಢಪಡಿಸಿದ ಪುರಾತತ್ತ್ವ ಇಲಾಖೆ

**ಮೊದಲ ಕನ್ನಡ ಶಾಸನ 'ತಾಳಗುಂದ ಶಾಸನ'**

ಪ್ರಜಾವಾಣಿ ವಾರ್ತೆ Updated: 12 ಜನವರಿ 2017, 17:06 IST

ತಾಳಗುಂದ ಶಾಸನ.

**ಶಿವಮೊಗ್ಗ**: ಎರಡು ವರ್ಷಗಳ ಹಿಂದೆ ಪತ್ತೆಯಾದ ತಾಳಗುಂದ ಶಾಸನ ಕನ್ನಡದ ಅತ್ಯಂತ ಪ್ರಾಚೀನ ಶಾಸನ ಎಂದು ಭಾರತೀಯ ಪುರಾತತ್ತ್ವ ಇಲಾಖೆ ಅಧಿಕೃತವಾಗಿ ಪ್ರಕಟಿಸಿದೆ.

ಹಲ್ಮಿಡಿ ಶಾಸನವೇ ಅತ್ಯಂತ ಪ್ರಾಚೀನ ಕನ್ನಡದ ಶಾಸನವೆಂದು ಇತಿಹಾಸದಲ್ಲಿ ದಾಖಲಾಗಿತ್ತು. ತಾಳಗುಂದದಲ್ಲಿ ದೊರೆತ ಶಾಸನದ ಕಾಲ ಕ್ರಿ.ಶ.370 ರಿಂದ 450ರ ಮಧ್ಯದ ಅವಧಿಯ ಈ ಶಾಸನ ಕದಂಬರ ದೊರೆಯು ವಜಿನಾಗ ಎಂಬ ಅಂಬಿಗನಿಗೆ ಭೂಮಿಯನ್ನು ಇನಾಮು ನೀಡಿದ ಮಾಹಿತಿಯನ್ನು ತಿಳಿಸುತ್ತದೆ. ಈ ಶಾಸನದಲ್ಲಿ ತುಂಡರಿಸಿದ ಏಳು

DOI: 10.59176
http://www.kristujayantijournal.com/index.php/KJKSP

ಸಾಲುಗಳಲ್ಲಿ ಕನ್ನಡ ಪದಗಳ ಬಳಕೆ ಮಡಲಾಗಿದೆ. ಶಾಸನಶಾಸ್ತ್ರದಲ್ಲಿ ಕನ್ನಡ ಶಾಸನ ಎಂದೇ ನಮೂದಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಕದಂಬರ ರಾಜಧಾನಿಯಾಗಿತ್ತು ಕದಂಬ ವಂಶದ ಸಂಸ್ಥಾಪಕ ಮಯೂರವರ್ಮ ಮೃತಪಟ್ಟಿದ್ದು 365ರಲ್ಲಿ ಆನಂತರದಲ್ಲಿ ಆಳಿದ ಅರಸರ ಕಾಲದಲ್ಲಿ ಈ ಶಾಸನ ಕೆತ್ತಿರಬಹುದು ಎಂಬುದು ಶಾಸನ ಶಾಸ್ತ್ರಜ್ಞರ ಅಭಿಪ್ರಾಯ. (ಪ್ರಜಾವಾಣಿ ವರದಿ 12 ಜನವರಿ 2017)

**ಹಲ್ಮಿಡಿ ಶಾಸನ**

ಶಾತವಾಹನರ ಅರಸು ಕನ್ನಡದ ಮೊದಲ ರಾಜ ಕದಂಬರ ಅರಸ ಮಯೂರಶರ್ಮನ ಚಂದ್ರವಳ್ಳಿಯ ಶಾಸನ ಬ್ರಾಹ್ಮಿ ಮತ್ತು ಪ್ರಾಕೃತ ಭಾಷೆಯಲ್ಲಿದ್ದರೂ ಜನಸಾಮಾನ್ಯರ ಭಾಷೆ ಕನ್ನಡವಾಗಿತ್ತು ಆದರೆ ಐದನೇ ಶತಮಾನದಲ್ಲಿ ಅಂದರೆ ಕ್ರಿ.ಶ.450ರ ಹಲ್ಮಿಡಿ ಶಾಸನ ಕನ್ನಡ ಭಾಷಾ ದೃಷ್ಟಿಯಿಂದ ಪ್ರಮುಖವಾದದ್ದಾಗಿದೆ.



ಶಾತವಾಹನರ ಅರಸು ಕನ್ನಡದ ಮೊದಲ ರಾಜ ಕದಂಬರ ಅರಸ ಮಯೂರಶರ್ಮನ ಚಂದ್ರವಳ್ಳಿಯ ಶಾಸನ ಬ್ರಾಹ್ಮಿ ಮತ್ತು ಪ್ರಾಕೃತ ಭಾಷೆಯಲ್ಲಿದ್ದರೂ ಜನಸಾಮಾನ್ಯರ ಭಾಷೆ ಕನ್ನಡವಾಗಿತ್ತು ಆದರೆ ಐದನೇ ಶತಮಾನದಲ್ಲಿ ಅಂದರೆ ಕ್ರಿ.ಶ.450ರ ಹಲ್ಮಿಡಿ ಶಾಸನ ಕನ್ನಡ ಭಾಷಾ ದೃಷ್ಟಿಯಿಂದ ಪ್ರಮುಖವಾದದ್ದಾಗಿದೆ.

DOI: 10.59176
http://www.kristujayantijournal.com/index.php/KJKSP

ಲಿಖಿತ ಸಾಕ್ಷ್ಯಾಧಾರಗಳ ಪ್ರಕಾರ ಕನ್ನಡ ಭಾಷೆಯ ಪ್ರಾರಂಭ ಹಲ್ಮಿಡಿ ಶಾಸನದಿಂದ ಪ್ರಾರಂಭವಗುತ್ತದೆ. ಯಾವುದೇ ಒಂದು ಭಾಷೆಯ ಇತಿಹಾಸವನ್ನು ತಿಳಿಯಲು ಭಾಷಾಶಾಸ್ತ್ರಜ್ಞರು ಆಧಾರವಾಗಿ ಗ್ರಂಥಗಳನ್ನು, ಶಾಸನಗಳನ್ನು, ನಾಣ್ಯಗಳನ್ನು ಇತರೆ ದಾಖಲೆಗಳನ್ನು ಪುರಾವೆಗಳಾಗಿ ಬಳಸುತ್ತಾರೆ. ಕನ್ನಡ ಭಾಷೆಯು ದ್ರಾವಿಡ ಭಾಷೆಯ ಮುಖ್ಯ ಲಕ್ಷಣವೆಂದರೆ ಎಡದಿಂದ ಬಲಕ್ಕೆ ಬರೆಯುವುದು, ಹಲ್ಮಿಡಿ ಶಾಸನವು ಎಡದಿಂದ ಬಲಕ್ಕೆ ಬರೆಯಲ್ಪಟ್ಟ ಶಾಸನ. ಕದಂಬರ ಕಾಲದ ಕನ್ನಡವನ್ನು ಪೂರ್ವದ ಹಳಗನ್ನಡವೆಂದು ತಿಳಿಯಲಾಗಿದೆ. ಈ ಕಾಲದ ಕನ್ನಡ ಲಿಪಿ ಹಳಗನ್ನಡ ಲಿಪಿಗಿಂತಲೂ ವಿಭಿನ್ನವಾಗಿದ್ದರೂ, ಶಾಸನದಲ್ಲಿರುವ ವಿಷಯ ಮತ್ತು ನುಡಿಯು ಕನ್ನಡ ನಾಡಿನ ಹಿರಿಮೆಯನ್ನು ತಿಳಿಸುತ್ತದೆ. ಇದೊಂದು ದಾನ ಶಾಸನವಾಗಿದ್ದು, ಇದರಲ್ಲಿ "ಬಾಳ್ಗಿಚ್ಚಾಗಿ" ನೀಡಿದ ವಿವರವನ್ನು ಹಾಗೂ "ಕುರುಂಬಿಡಿ" ಎಂಬ ತೆರಿಗೆಯಿಂದ ವಿನಾಯಿತಿಯನ್ನು ಕೊಟ್ಟದ್ದನ್ನು ಹೇಳುತ್ತದೆ. ಈ ಶಾಸನದಲ್ಲಿ ಕವಿರಾಜಮಾರ್ಗಕ್ಕಿಂತ ಹಿಂದಿನ ಕಾಲದ ಕನ್ನಡ ದ್ವಿತೀಯಾ ವಿಭಕ್ತಿ "ಅನ್"ಗೆ ಬದಲಾಗಿ "ಆನ್" ಧೀರ್ಘವಿದೆ. ಉದಾ: ಕುಲಭೋರನಿಗೆ ಬದಲಾಗಿ ಕುಲಭೋರನಾ ಎಂಬುದನ್ನು ದೇಶದ ಬದಲಾಗಿ ದೇಸದಾ ಎಂಬುದನ್ನು ನೋಡಬಹುದು. ವಿಭಕ್ತಿ ಪ್ರತ್ಯಯಗೆ ಉಳ್ ಎಂಬ ರೂಪದ ಪದಗಳ ಬಳಕೆ, ಈ ಶಾಸನದ ಅನನ್ಯ ವ್ಯಾಕರಣ ರೂಪಗಳಲ್ಲಿ ಕೆಲವು ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವವಿರುವುದನ್ನು ನೋಡಬಹುದು. "ಪೆತ್ತಜಯನ್" ಎಂಬ ಅರಿಸಮಾಸ ಹಾಗೂ "ಪೊಗಳೆ ಪೊಟ್ಟಣ" ಎಂಬ ಕರ್ಮಣಿ ರೂಪವನ್ನು ನೋಡಬಹುದು ಕ್ರಿ.ಶ. 450ರಷ್ಟು ಹಿಂದೆಯೇ ಸಂಸ್ಕೃತದ ವ್ಯಾಕರಣವು ಕನ್ನಡ ಭಾಷೆಯ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಅತ್ಯಂತ ಪ್ರಾಚೀನ ಕನ್ನಡ ಶಾಸನ ಎಂ.ಎಚ್ ಕೃಷ್ಣ ಸಂಪಾದಕರು ಎನ್.ಎಸ್. ತಾರನಾಥ ಕನ್ನಡ ಸಾಹಿತ್ಯ ಅಕಾಡೆಮಿ

**ಐಹೊಳೆ ಶಾಸನ**



ಐಹೊಳೆ ಶಾಸನವು ಕ್ರಿ.ಶ.634/635ರಲ್ಲಿ ಇಮ್ಮಡಿ ಪುಲಕೇಶಿಯ ಆಸ್ಥಾನ ಕವಿ ರವಿಕೀರ್ತಿಯಿಂದ ರಚಿತವಾಗಿದ್ದು, ಚಾಲುಕ್ಯ ದೊರೆ ಇಮ್ಮಡಿ ಪುಲಿಕೇಶಿಗೆ ಸಂಬಂಧಪಟ್ಟುದಾಗಿದ್ದು, ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಐಹೊಳೆ ಗ್ರಾಮದ ಮೇಗುತಿ ದೇವಾಲಯದ ಪೂರ್ವ ದಿಕ್ಕಿನ ಗೋಡೆಯಲ್ಲಿ ಈ ಶಾಸನವಿದೆ. ಈ ಶಾಸನದ ವಿಶಿಷ್ಟವೆಂದರೇ ಭಾಷೆ ಸಂಸ್ಕೃತ, ಲಿಪಿ ಹಳಗನ್ನಡ. ಆರ್ಯಪುರವಾಗಿದ್ದ ಸ್ಥಳ ಕಾಲಾನುಕ್ರಮದಲ್ಲಿ ಆಡುಭಾಷೆಯಲ್ಲಿ ಐಹೊಳೆಯಾಯಿತು. ಐಹೊಳೆ ಶಾಸನವು ಪ್ರಶಸ್ತಿ ಶಾಸನವಾಗಿದ್ದು ಕನ್ನಡ ಮತ್ತು ತೆಲುಗು ಭಾಷೆಯ ಅಕ್ಷರಗಳಂತೆ ತೋರುತ್ತದೆ. ಇಮ್ಮಡಿ ಪುಲಕೇಶಿಯ ದಿಗ್ವಿಜಯವನ್ನು ಕುರಿತದ್ದಾಗಿದ್ದರೂ, ದಕ್ಷಿಣದ ರಾಜ ಪುಲಿಕೇಶಿಯು ಉತ್ತರದ ರಾಜ ಹರ್ಷವರ್ಧನನನ್ನು ನರ್ಮದಾ ನದಿಯ ಗಡಿಯಲ್ಲಿ ಹಿಮ್ಮೆಟ್ಟಿಸಿದ ವಿಚಾರವನ್ನು ಹಾಗೂ ರವಿಕೀರ್ತಿ ತನ್ನನ್ನು ಸಂಸ್ಕೃತದ ಕವಿಗಳಾದ ಕಾಳಿದಾಸ ಮತ್ತು ಭಾರವಿಗೆ ತಾನು ಸಮನೆಂದು ಹೇಳಿಕೊಂಡಿದ್ದಾನೆ. ಈ ಶಾಸನದ ಮತ್ತೊಂದು ವಿಶೇಷ ಕಲಿಯುಗದ 3736ರಲ್ಲಿ ಈ ಶಾಸನ ಹೊರಡಿಸಲಾಗಿದೆ. ಇದು ಕ್ರಿ.ಶ.635ಕ್ಕೆ ಸಮನಾಗಿದೆ. (ಕರ್ನಾಟಕ ವೈಭವ 2012)

**ತಮಟಕಲ್ಲು ಶಾಸನ**





ತಮಟಕಲ್ಲು ಶಾಸನ ಪೂರ್ವದ ಹಳಗನ್ನಡದ ವೀರಗಲ್ಲು ಶಾಸನ. ಈ ಶಾಸನ ಕನ್ನಡದ ಮೊದಲ ಸಾಹಿತ್ಯ ಕಾವ್ಯವೂ ಹೌದು. ಕನ್ನಡದ ಮೊದಲ ಛಂದಸ್ಸಿನ ಪದ್ಯವೂ ಹೌದು ಕನ್ನಡದ ಶಾಸನದ ಮೊದಲ ಕಾವ್ಯವು ಹೌದು ಕಾಲ ಕ್ರಿ.ಶ.500. ಚಿತ್ರದುರ್ಗ ಜಿಲ್ಲೆಯ ತಮ್ಮಟಕಲ್ಲು ಗ್ರಾಮದ ಹೊಲದಲ್ಲಿ ದೊರೆತಿದೆ.

ಎಫಿಗ್ರಾಫಿಯ ಕರ್ನಾಟಕದ ಸಂಪುಟ 6ರಲ್ಲಿರುವ 42 ಮತ್ತು 43ನೇ ಶಾಸನ ಈ ಶಾಸನ ಪ್ರಾಸಯುಕ್ತವಾಗಿದೆ. ಬಿನಮಣಿಅನ್ತುಭೋಗಿಬಿಣದುಳ್ಮಣಿಲ್ಮನದೋನ್ ಎಂದು ಆರಂಭವಾಗುವ ವೃತ್ತವಿದೆ. ಕನ್ನಡ ಕೈಪಿಡಿಯಲ್ಲಿ ಇದೇ ವೃತ್ತವನ್ನು ಸುಮಂಗಲಿ ಎಂದೂ ನತ್ಕುಟಕ ವಥತ್ತವೆಂದೂ ಕರೆದಿದ್ದಾರೆ. ಗೋವಿಂದ ಪೈ ಈ ವೃತ್ತವನ್ನು ಕನಕಾಬ್ಜನೀಯ ನರ್ಕುಟ ಎಂದು ಕರೆದಿದ್ದಾರೆ. ಈ ವೃತ್ತವು ಸಂಸ್ಕೃತದ್ದೇ ಆಗಿದ್ದರೂ, ಸಂಸ್ಕೃತ ಸಾಹಿತ್ಯದಲ್ಲಿ ಈ ವೃತ್ತ ಕಾಣಸಿಗದು. ಕನ್ನಡದಲ್ಲಿ ಸಂಸ್ಕೃತ ವೃತ್ತವನ್ನು ಬಳಸುವಾಗ ಹೊಸತನವಿರಬೇಕೆಂಬ ಹಿನ್ನಲೆಯಲ್ಲಿ ಈ ಶಾಸನದ ಕವಿಯು ಇದನ್ನು ಬಳಸಿರಬೇಕೆಂದು ವಿದ್ವಾಂಸರು ಹೊಸತನವಿರಬೇಕೆಂಬ ಹಿನ್ನಲೆಯಲ್ಲಿ ಈ ಶಾಸನದ ಕವಿಯು ಇದನ್ನು ಬಳಸಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ತಮಟಕಲ್ಲು ಶಾಸನ ಪ್ರಾಸಯುಕ್ತವಾಗಿದೆ. ಕನ್ನಡದಲ್ಲಿ ಆರನೆಯ ಶತಮಾನದ ಹೊತ್ತಿಗಾಗಲೇ ಕಾವ್ಯ ಮೌಲ್ಯವುಳ್ಳ ಪದ್ಯ ರಚನೆ ಪ್ರಾರಂಭವಾಗಿದ್ದರ ಜೊತೆಗೆ ಸಂಸ್ಕೃತ ವರ್ಣವೃತ್ತಗಳನ್ನು ಬಳಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಈ ಶಾಸನ ಭಾಷಿಕ ಅಧ್ಯಯನಕ್ಕೆ ಲಕ್ಷ್ಯ ಕೃತಿ ಎಂಬ ಅಭಿಪ್ರಾಯವಿದೆ. ಮಾಸಿಕಪುರವನ್ನು ಆಳಿದ ಗುಣ ಮಧುರಾಂಕನ ಸ್ವಭಾವ ಮತ್ತು ಸಾಧನೆಗಳನ್ನು ವಿವರಿಸುತ್ತದೆ ಎಂದು ಪ್ರಖ್ಯಾತ ಇತಿಹಾಸಕಾರ ಮತ್ತು ಶಿಲಾಶಾಸನಕಾರ ಡಾ.ಬಿ. ರಾಜಶೇಖರಪ್ಪ ಹೇಳಿದ್ದಾರೆ.”(15 ಸೆಪ್ಟೆಂಬರ್ 2020ರ ಕನ್ನಡಪ್ರಭ ಪತ್ರಿಕೆ )

**ಕಪ್ಪೆ ಅರಭಟ್ಟನ ಶಾಸನ**



ಕನ್ನಡದಲ್ಲಿ ತ್ರಿಪದಿಗೆ ವಿಶೇಷ ಸ್ಥಾನವಿದೆ. ತ್ರಿಪದಿಯೇ ಕನ್ನಡ ವೃತ್ತಗಳ ಗಾಯತ್ರಿ ಎಂದಿದ್ದಾರೆ. ದ.ರಾ.ಬೇಂದ್ರೆ. ತ್ರಿಪದಿ ಎಂದೊಡನೆ ನಮಗೆ ನೆನಪಾಗುವುದು ಸರ್ವಜ್ಞನ ನುಡಿಮುತ್ತುಗಳು. ಆದರೆ ಸರ್ವಜ್ಞನಿಗಿಂತ ಮುಂಚೆಯೇ ನಮಗೆ ಕನ್ನಡದಲ್ಲಿ ಸುಮಾರು ಏಳನೆಯ ಶತಮಾನದ ಕಪ್ಪೆ ಅರಭಟ್ಟನ ಬಾದಾಮಿ ಶಾಸನವು ಅನೇಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಶಸನದ ಭಾಷೆ ಹಳಗನ್ನಡ ಮೊದಲ ಶ್ಲೋಕ ಸಂಸ್ಕೃತದಲ್ಲಿದೆ. ಉಳಿದದ್ದು ಕನ್ನಡ ಛಂದಸ್ಸಿನ ತಾಯಿ ಬೇರು ತ್ರಿಪದಿಯಲ್ಲಿದೆ. ಪ್ರೊ. ರಂ.ಶ್ರೀ.ಮುಗಳಿ ಅವರು ತ್ರಿಪದಿಯ ಮಟ್ಟಿನ ಮೊಟ್ಟ ಮೊದಲನೆಯ ರೂಪವು ಅದರಲ್ಲಿದೆ ಎಂದಿದ್ದಾರೆ. ಒಬ್ಬ ಕನ್ನಡ ವೀರನ ಆವೇಶಯುತವಾದ ಸ್ವಭಾವ ಚಿತ್ರಣ ಅದರಲ್ಲಿದೆ. ಈ ಶಾಸನದಲ್ಲಿ ಬಳಸಿರುವ ಕನ್ನಡವು ಪೂರ್ವದ ಹಳಗನ್ನಡವು ಹಳಗನ್ನಡವಾಗಿ ಪರಿವರ್ತನೆಯಾಗುತ್ತಿದ್ದ ಹಂತಕ್ಕೆ ಇರುವುದನ್ನು ಪದರಚನೆ ಮತ್ತು ವಾಕ್ಯರಚನೆಗೆ ಸಂಬಂಧಿಸಿದ ಕೆಲವು ಅಂಶಗಳು ಆ ಸಂಗತಿಯನ್ನು ಸ್ಪಷ್ಟಪಡಿಸುತ್ತವೆ. ಹೀಗೆ ಶಾಸನವು ಭಾಷಾಶಾಸ್ತ್ರ, ಛಂದಸ್ಸು ಮತ್ತು ಸಾಹಿತ್ಯ ಎಂಬ ಮೂರು ನೆಲೆಗಳಿಂದಲೂ ಬಹಳ ಮುಖ್ಯವಾದುದು. ಕಪ್ಪೆ ಅರಭಟ್ಟನನ್ನು ತಿ.ನಂ.ಶ್ರೀಯವರು ಕಪ್ಪೆಯರಭಟ್ಟ ಎಂದೂ, ಎಂ.ಎಂ.ಕಲಬುರ್ಗಿಯವರು ಕಪ್ಪಡಿ ಯರ ಭಟ್ಟ ಎಂಬುದಾಗಿ ಅರ್ಥೈಸಿದ್ದಾರೆ.

ಏಳನೆ ಶತಮಾನದ ಹಳಗನ್ನಡ ಲಿಪಿಯಲ್ಲಿರುವ ಈ ಶಾಸನದಲ್ಲಿ ಕನ್ನಡದ ಮೊದಲ ತ್ರಿಪದಿಗಳು ದೊರೆಯುತ್ತವೆ. ಬಂಡೆಗಲ್ಲಿನ ಮೇಲೆ ರಚಿತವಾಗಿರುವ ಈ ಶಾಸನ ಐತಿಹಾಸಿಕ ಮಹತ್ವವುಳ್ಳದ್ದಾಗಿದ್ದು, ಕಪ್ಪೆ ಅರಭಟ್ಟನ ಬಗ್ಗೆ ರಚಿತವಾಗಿರುವುದರಿಂದ ಅವರ ಹೆಸರಿನಿಂದಲೇ ಈ ಶಾಸನ ಪ್ರಸಿದ್ಧವಾಗಿದೆ. ಬಾದಾಮಿ ಶಾಸನದ ಕನ್ನಡ ಹಳಗನ್ನಡವಾದರೂ ಅದು ಅರ್ಥವಾಗದಷ್ಟು ಕಷ್ಟವಾದ ಪದಗಳಿಂದ ಕೂಡಿಲ್ಲ, ಕನ್ನಡ ಸಾಹಿತ್ಯ ಚರಿತ್ರೆ ಪುಟ 11–12ರಲ್ಲಿ ಈ ಶಾಸನವನ್ನು ಭಾವ ಭಾಷೆಗಳ ಯೋಗ್ಯ ಮಿಲನವುಳ್ಳ ಸ್ವಯಂ ಪೂರ್ಣವಾದ ಭಾವಗೀತೆಯ ಸತ್ವವೂ ತುಂಬಿದೆ ಎನ್ನಲಾಗಿದೆ. ಅಪಕೀರ್ತಿಗಿಂತ ಮರಣವೇ ಲೇಸು ಎಂದು ಬಗೆಯುತ್ತಿದ್ದ ಕಪ್ಪೆ ಅರಭಟ್ಟನೆಂಬ ಸಾಧು ಪುರುಷನ ಕೀರ್ತಿಯನ್ನು ಕನ್ನಡದಲ್ಲಿ ಅದರಲ್ಲೂ ತ್ರಿಪದಿಯಲ್ಲಿ ಹೊಗಳುವ ವೀರಗಲ್ಲಿನ ರೂಪದ ಪ್ರಾಚೀನ ಶಾಸನ. ಕಪ್ಪೆ ಅರಭಟ್ಟ

ಜನಾನುರಾಗಿಯಾಗಿ ಜನರ ಕಷ್ಟಕಾಲದಲ್ಲಿ ನೆರವಾಗಗುತ್ತಿದ್ದನು. ಅಪದ್ಭಾಂವನಂತಿದ್ದ ಈತ ಒಳ್ಳೆಯವನಾಗಿ ತೊಂದರೆ ಕೊಡುವವರಿಗೆ ಸಿಂಹಸ್ವಪ್ನವಾಗಿದ್ದನು. ಮಹಾಭಾರತದಲ್ಲಿ ಕೃಷ್ಣ ಹೇಗೆ ದುಸ್ಟ ಶಿಕ್ಷೆ ಶಿಷ್ಟ ರಕ್ಷೆ ಮಾಡುತ್ತಾನೆ. ಎನ್ನುವ ರೀತಿಯಲ್ಲಿ ಈತನಿದ್ದನು. ಈ ಶಾಸನದ ಆರನೇ ಸಾಲಿನಲ್ಲಿ ಪೆರನಲ್ಲ ಮತ್ತು ಏಳನೆಯ ಸಾಲಿನಲ್ಲಿ ಅದರಂತೆ ಎವಂಬ ಕಡೆ ಈಗಿನ ರ ಬದಲು ಮೂಲದಲ್ಲಿ ಶಕಟರೇಫ ಇದೆ. ಲಿಪಿ ಏಳನೆಯ ಶತಮಾನದ ಕನ್ನಡದಲ್ಲಿದೆ.





DOI: 10.59176
http://www.kristujayantijournal.com/index.php/KJKSP 

ಬಾದಾಮಿ ಜಿಲ್ಲೆಯ ಸಿಡಿಲಫಡಿಯಲ್ಲಿ ಕಪ್ಪೆ ಅರಭಟ್ಟನ ಮತ್ತೊಂದು ಶಾಸನ ದೊರೆತಿದೆ ಎಂದು ಇತಿಹಾಸಜ್ಞ ಡಾ. ಎಚ್.ಎಸ್. ಗೋಪಾಲ್ ರಾವ್ ಹೇಳಿದ್ದಾರೆ. ಈ ಶಾಸನವು ತಟ್ಟುಕೋಟೆಯ ಕಪ್ಪೆ ಅರಭಟ್ಟನ ಶಾಸನಕ್ಕಿಂತಲೂ ಹಳೆಯದು ಎಂದು ರಾವ್ ಅವರ ಅಭಿಪ್ರಾಯವಾಗಿದೆ. (ಫೆಬ್ರವರಿ 03/2011)

ಸಿಡಿಲಫಡಿಯು ಒಂದು ತೆರೆದ ಗುಹೆ. ತಟ್ಟುಕೋಟೆಯ ಶಾಸನಕ್ಕಿಂತಲೂ ಹಿಂದಿನ ಶಾಸನವಾಗಿರುವ ಸಿಡಿಲಫಡಿಯ ಶಾಸನದಲ್ಲಿ ಮೊದಲು ಕಪ್ಪೆ ಅರಭಟ್ಟನ ಬಗ್ಗೆ ಉಲ್ಲೇಖವಿದ್ದು ಆ ನಂತರದಲ್ಲಿ ಕಪ್ಪೆ ಅರಭಟ್ಟನ ನೆನಪಿಗಾಗಿ ತಟ್ಟುಕೋಟೆಯಲ್ಲಿ ಕೆತ್ತಲಾಗಿದೆ ಎಂಬ ವಿಚಾರವನ್ನು ಡಾ.ಎಚ್.ಎಸ್. ಗೋಪಾಲ್ ರಾವ್ ಅವರು ಹೇಳಿದ್ದಾರೆ.(ಕಪ್ಪೆ ಅರಭಟ್ಟನ ಮತ್ತೊಂದು ಶಾಸನದ ಶೋಧ : ಬಾಲ ಸುಬ್ರಮಣ್ಯ ಜಿ)

**ನಂದಿಸೇನ ಪ್ರವರ ಮುನಿಯ ಶಾಸನ**

ಇದೊಂದು ನಿಷಿದ್ದಿ ಕಲ್ಲು ಶಾಸನ ಶ್ರವಣಬೆಳಗೊಳದ ಪ್ರಾಚೀನ ಶಾಸನ ಕಾಲ ಕ್ರಿ.ಶ.ಸುಮಾರು 650 ರಿಂದ 700 ಶ್ರವಣಬೆಳಗೊಳದ ಬೆಟ್ಟವೊಂದು ಶಾಸನ ಚಿತ್ರಕಾವ್ಯ ಕೂಟದಂತಿದೆ. ಒಂದೊಂದು ಶಾಸನವು ಒಂದೊಂದು ಭಾವಗೀತೆಯಂತೆ ಸೊಗಸಾದ ಉಪಮೆ, ರೂಪಕಗಳಿಂದ ಕೂಡಿದೆ. ಕಾವ್ಯ ಸ್ವಾರಸ್ಯದ 50ಕ್ಕೂ ಹೆಚ್ಚು ಪದ್ಯಗಳು ಈ ಶಾಸನದಲ್ಲಿ ದೊರೆಯುತ್ತದೆ. ಇವುಗಳಲ್ಲಿ ಕಾವ್ಯಶಕ್ತಿ, ಅಲಂಕಾರ ವ್ಯಾಕರಣ ವಿಚಾರ, ಭಾಷಿಕ ವಿವರ, ಜೈನ ಯತಿಗಳ ಜೀವನದ ವಿವರ ಮುಂತಾದವುಗಳಿವೆ. ಖ್ಯಾತ ಕರ್ನಾಟಕ ವೃತ್ತಗಳನ್ನು ಬಳಸಲಾಗಿದೆ. ಹಾಗಾಗಿ ಕನ್ನಡ ಶಾಸನ ಪರಂಪರೆಯಲ್ಲಿ ಈ ಶಾಸನವು ಉನ್ನತ ಸ್ಥಾನಗಳಿಸಿವೆ. ಸುಮಾರು 7ನೇ ಶತಮಾನದ ನಂದಿಸೇನ ಮುನಿಯ ಶಾಸನವನ್ನು ಕುರಿತು ಇನ್ಸ್ಟಿಟ್ಯೂಟ್ ಫಾರ್ ಕ್ಲಾಸಿಕಲ್ ಕನ್ನಡ ಸ್ಟಡೀಸ್ ಪ್ರಕಾರ ಕ್ರಿ.ಶ. 700ರ ಕಾಲದ ಈ ಶಾಸನವುಸಾಹಿತ್ಯದ ಗುಣಲಕ್ಷಣಗಳು ಮತ್ತು ಅಲಂಕಾರಗಳೊಂದಿಗೆ ವ್ಯಾಪಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದ ಅಭಿವೃದ್ಧಿಯ ಅಧ್ಯಯನಕ್ಕೆ ಬಹಳ ಮುಖ್ಯವಾಗಿದೆ. ಈ ಶಾಸನವು ಶ್ರವಣಬೆಳಗೊಳದ ಸಂತ ನಂದಿಸೇನ ಸ್ವರ್ಗಕ್ಕೆ ತನ್ನ ಪ್ರಯಾಣವನ್ನು ಮಾಡಿದುದನ್ನು ತಿಳಿಸುತ್ತದೆ. ಕವಿರಾಜಮಾರ್ಗಕಾರ ಹೇಳಿರುವ ಪದ್ಯ ಕವಿಗಳು ಗದ್ಯಕವಿಗಳು ಅವರು ಬರೆದಿರುವ ಕೃತಿಗಳು ನಮಗೆ ಲಭ್ಯವಿಲ್ಲದಿದ್ದರೂ, ಶಾಸನಗಳ ಮುಖಾಂತರ ಕನ್ನಡ ಸಾಹಿತ್ಯ ಪರಂಪರೆ ಕ್ರಿ.ಶ. ನಾಲ್ಕನೇ ಶತಮಾನಕ್ಕಾಗಲೇ ಪ್ರವರ್ಧಮಾನಕ್ಕೆ ಬಂದಿತ್ತು ಎನ್ನುವುದನ್ನು ತಿಳಿಯಬಹುದು.

**ಆಕರ ಕೃತಿಗಳು ಮತ್ತು ಉಲ್ಲೇಖಗಳು :**

1. ಪ್ರಜಾವಾಣಿ., 12 ಜನವರಿ 2017
2. ಮಧುಚ್ಛಂದ., ಕಪ್ಪೆ ಅರಭಟ್ಟನ ಮತ್ತೊಂದು ಶಾಸನ ಶೋಧ., ಬಾಲ ಸುಬ್ರಮಣ್ಯ ಜಿ. 2011
3. ಕರ್ನಾಟಕ ವೈಭವ., ನೀಲಾ ಮಂಜುನಾಥ್., 2012., ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಕರ್ನಾಟಕ ಸರ್ಕಾರ.
4. ಪ್ರಜಾವಾಣಿ ಪತ್ರಿಕೆ., 03 ಫೆಬ್ರವರಿ 2011